ಸಾಲಿನಿಂದ
ಪ್ರತ್ಯೇಕ ಮಾಹಿತಿ-
ಗಳನ್ನು ನೀಡಿದೆ.

ಇ) ಈ ಎರಡೂ ವಲಯಗಳಿಂದ ಪೆಚ್ಚವಾದ ಮೊತ್ತದ ವಿವರಗಳು ಈ ಕೆಳಕಂಡಂತಿದೆ.

ವರ್ಷ	ಸಣ್ಣ ನೀರಾವರಿ (ದ) ವಲಯ ಬೆಂಗಳೂರು (ಲಕ್ಷ ರೂ.ಗಳಲ್ಲಿ)	ಸಣ್ಣ ನೀರಾವರಿ(ಉ) ವಲಯ ಬಿಜಾಪುರ (ಲಕ್ಷ ರೂ.ಗಳಲ್ಲಿ)
1991-92	3345.88	-
1992-93	5154.07	-
1993-94	3140.86	2868.60

ವಿಷಯ : ಬೆಳಗಾಂ ತಾಲ್ಲೂಕುಗಳಲ್ಲಿನ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಬರುವ ರಸ್ತೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :376(732)

ಶ್ರೀ ಕೆ.ಸಿ. ಮೊಡಗೇಕರ್ ದೇಸಾಯಿ (ಹಿರೇಬಾಗೆವಾಡಿ) : ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಎಷ್ಟು ರಸ್ತೆಗಳಿವೆ ಮತ್ತು ಅವುಗಳ ವಿವರಗಳೇನು?

ಆ) 1992-93, 1993-94 ಹಾಗೂ 1994-95ರ ಆಯವ್ಯಯದಲ್ಲಿ ಈ ರಸ್ತೆಗಾಗಿ ಒದಗಿಸಿರುವ ಅನುದಾನದ ಮೊತ್ತವೆಷ್ಟು? ಮತ್ತು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಇ) ಈ ಹದಗೆಟ್ಟಿರುವ ಸೇತುವೆಗಳಿಗೆ ಹಾಗೂ ರಸ್ತೆ ದುರಸ್ತಿಗಾಗಿ ಎಷ್ಟು ಹಣ ವ್ಯಯ ಮಾಡಲಾಗಿದೆ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬೆಳಗಾಂ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 17 ರಸ್ತೆಗಳು ಇರುತ್ತದೆ.

ಅವುಗಳ ವಿವರವನ್ನು ಅನುಬಂಧದಲ್ಲಿ ಇಡಲಾಗಿದೆ.

ವರ್ಷ	ಒದಗಿಸಲಾದ ಅನುದಾನ	ಆಗಿರುವ ವೆಚ್ಚ (ಲಕ್ಷ ರೂ. ಗಳಲ್ಲಿ)
1992-93	18.00	37.16
1993-94	30.00	31.21
1994-95	30.00	7.49 (ಜುಲೈ 94ರ ವರೆಗೆ)

ಇ) ಈ ರಸ್ತೆಗಳ ಮೇಲೆ ಬರುವ ಸೇತುವೆಗಳ ಮತ್ತು ರಸ್ತೆಗಳ ರಿಪೇರಿ ಹಾಗೂ ಸುಧಾರಣೆಯನ್ನು ಪ್ರತಿವರ್ಷವೂ ಮಾಡುತ್ತಿದ್ದು, ಕೆಳಕಂಡಂತೆ ವೆಚ್ಚ ಮಾಡಲಾಗಿದೆ.

ವರ್ಷ	ವೆಚ್ಚ (ಲಕ್ಷ ರೂ.ಗಳಲ್ಲಿ)
1992-93	37.16
1993-94	31.21
1994-95	7.49

ಬೆಳಗಾಂ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿರುವ ರಸ್ತೆಗಳ ವಿವರ.

ಅನುಬಂಧ

ರಾಜ್ಯ ಹೆದ್ದಾರಿಗಳು :-

1) ರಾಯಚೂರು - ಬಾಜಿ ರಸ್ತೆ

2) ಪತಗೋವ್ ರಸ್ತೆ.

ಜಿಲ್ಲಾ ಮುಖ್ಯ ರಸ್ತೆಗಳು

1) ಬೆಳಗಾಂ-ಸಿಟಿಗೆ ಜೋಡಿಸುವ ಲಿಂಕ್ ರಸ್ತೆ

2) ಬೆಳಗಾಂ-ಬಳಕವಾಡಿ ವಾಳಗಾಂ ರಸ್ತೆ

3) ಅಲ್ಯೂಮಿನಿಯಂ ಫ್ಯಾಕ್ಟರಿ ಕೂಡು ರಸ್ತೆ

4) ಬೆಳಗಾಂ - ಜಾಂಬೋಟಿ ರಸ್ತೆ.

5) ಬೆಳಗಾಂ - ಬೂದಿಹಾಳ - ಅಂಕಲಗಿ- ಗೋಕಾಕ್ ರಸ್ತೆ.

6) ಸುಳಗಿ - ಬೆಳಕುಂಡಿ ರಕ್ಕಸಗೊಪ್ಪ ರಸ್ತೆ.

7) ಬೆಳಗಾಂ-ಬೆಳಗುಂಡಿ ರಸ್ತೆ.

ಮುಖ್ಯ ಜಿಲ್ಲಾ ರಸ್ತೆಗಳನ್ನಾಗಿ ಮೇ 1992ರಲ್ಲಿ ಮೇಲ್ದರ್ಜೆಗೇರಿಸಿದ ರಸ್ತೆಗಳು :-

8) ಕಿನಿಯೆದಿಂದ ದೇಸೂರ ವಯಾ ವಾಗವಡೆ ಜೇಡನ ರಸ್ತೆ.

9) ಹಿಂಡಲಗಾ ಗೋಜಗೆ, ಬೆಕ್ಕಿನಕೇರಿ, ಕೂವಾಡ ಮಹಾರಾಷ್ಟ್ರ ರಾಜ್ಯದ ರಗಡಿ ಹೊರಗೆ ಗಡಿ ರಸ್ತೆ.

10) ದೇಸೂರ - ನಂದಿಹಳ್ಳಿ, ಗಜಪತಿ ರಸ್ತೆ.

11) ಮಡಗಾವ ಯಳ್ಳೂರ ರಾಜಹಂಸಗಡ ರಸ್ತೆ.

12) ಬೆಂಡಿಗೇರಿ, ಕಲಾರಕೊಪ್ಪ ರಸ್ತೆ, ವಯಾ ಸುತಗಟ್ಟಿ, ಹಲಗಿನ ಮರಡಿ, ಕೆ.ಕೆ.ಕೊಪ್ಪ ರಸ್ತೆ (ರಾಷ್ಟ್ರೀಯ ಹೆದ್ದಾರಿ - 4 ರ ಹೊರಗಿನ ರಸ್ತೆ).

13) ಕಂಗ್ರಾಳಿ ಅಗಸಗಾ - ಹಂದಿಗಾನೂರ ಸುತಗಟ್ಟಿ ರಾಷ್ಟ್ರೀಯ ಹೆದ್ದಾರಿ - 4 ರವರೆಗಿನ ರಸ್ತೆ.

14) ಬಾಗೇವಾಡಿ - ಬಸಾಪುರ ವಯಾ ಉಡಗಿ ರಾಯಚೂರು ಬಾಟಿ ರಸ್ತೆ - ರಾಜ್ಯ ಹೆದ್ದಾರಿ ಕೊಡುವ ರಸ್ತೆ.

15) ಹಲಗ - ತಿಗಡಿ ರಸ್ತೆ.

ವಿಷಯ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಇಲಾಖೆ ಕೆರೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 377 (235)

ಶ್ರೀ ಸಿ. ಬಸವರಾಜ್ (ಬ್ರಹ್ಮಾವರ) - ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಂತೆ ಇಲಾಖೆಯಲ್ಲಿ ಕೆರೆಗಳ ಪಟ್ಟಿಯ ದಾಖಲಾತಿ ಇದೆಯೇ (ವಿವರ ನೀಡುವುದು) :

ಆ) ದೇವಸ್ಥಾನದ ಕೆರೆಗಳು ಈ ಪಟ್ಟಿಯಲ್ಲಿ ಸೇರ್ಪಡೆಯಾಗುತ್ತದೆಯೇ, ಆಗಿದ್ದಲ್ಲಿ, ದೇವಸ್ಥಾನಗಳ ಕೆರೆಗಳ ಸಂಖ್ಯೆ ಎಷ್ಟು (ಹೆಸರು ಸಹಿತ ವಿವರ ನೀಡುವುದು);